# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 149

ಸದಸ್ಯರ ಹೆಸರು : ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 05.07.2023.

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ ಬನ್ನೇರುಘಟ್ಟ ಅರಣ್ಯ ಪ್ರದೇಶದ ಸುತ್ತ ಮುತ್ತ ನಿರ್ಮಾಣವಾಗಿರುವ ಬಡಾವಣೆಗಳು ಮತ್ತು ಅಪಾರ್ಟ್ ಮೆಂಟ್‌ಗಳ ಸಂಖ್ಯೆ ಎಷ್ಟು; ಮತ್ತು ಅವು ಯಾವುವು; (ನಿರ್ಮಾಣ ಮಾಡಿದವರ/ಕಂಪನಿಯ ಹೆಸರು ಮತ್ತು ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲೆ ಬನ್ನೇರುಘಟ್ಟ ಅರಣ್ಯ ಪ್ರದೇಶದ ಸುತ್ತ ಮುತ್ತ ಪ್ರತ್ಯೇಕ ಹೆಸರಿನ ಬಡಾವಣೆಗಳು ಇರುವುದಿಲ್ಲ. ಬನ್ನೇರುಘಟ್ಟ ಅರಣ್ಯ ಪ್ರದೇಶದ ಸುತ್ತಮುತ್ತ ನಿರ್ಮಾಣವಾಗಿರುವ ಹಿಡುವಳಿ ಸರ್ವೆ ನಂಬರವಾರು ಅನಧಿಕೃತ ಮನೆಗಳು/ನಿವೇಶನಗಳಾಗಿ ಪರಿವರ್ತಿಸಿರುವ ಖಾತೆದಾರರು ಹಾಗೂ ಸರ್ವೆ ನಂಬರ್ ಮತ್ತು ವಿಸ್ತೀರ್ಣಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಸದರಿ ಬಡಾವಣೆ ಮತ್ತು ಅಪಾರ್ಟ್ ಮೆಂಟ್ ನಿರ್ಮಾಣ ಮಾಡಿದವರು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿರುವ ಪ್ರಕರಣಗಳು ಎಷ್ಟು; ಒತ್ತುವರಿ ಮಾಡಿರುವ ವ್ಯಕ್ತಿ ಮತ್ತು ಸಂಸ್ಥೆಯ ಹೆಸರು ನೀಡುವುದು; | ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿ ಬಡಾವಣೆ ಮತ್ತು ಅಪಾರ್ಟಮೆಂಟ್ ನಿರ್ಮಾಣವಾಗಿರುವುದು ಕಂಡುಬಂದಿರುವುದಿಲ್ಲ. |
| ಇ) | ಸದರಿ ಒತ್ತುವರಿದಾರರ ಮೇಲೆ ನ್ಯಾಯಾಲಯ ಮತ್ತು ಇತರ ಕಾರ್ಯಾಲಯಗಳಲ್ಲಿ ದಾಖಲಾಗಿರುವ ದೂರುಗಳೆಷ್ಟು; (ಸಂಪೂರ್ಣ ವಿವರ ನೀಡುವುದು) | ಪ್ರಶ್ನೆ ಉದ್ಭವಿಸುವುದಿಲ್ಲ. |
| ಈ) | ಸದರಿ ಪ್ರದೇಶದಲ್ಲಿ ಅಕ್ರಮ ಸಕ್ರಮ ಯೋಜನೆಯಲ್ಲಿ ಅಥವಾ ಇತರೆ ಯೋಜನೆಯ ಮೂಲಕ ಎಷ್ಟು ಜನತೆಯ ಮನೆಗಳಿಗೆ ಹಕ್ಕುಪತ್ರ ವಿತರಣೆ ಮತ್ತು ಸಾಗುವಳಿ ಚೀಟಿ ನೀಡಲಾಗಿದೆ? (ವಿತರಣೆಗೆ ಅನುಸರಿಸಿದ ಪ್ರಕ್ರಿಯೆಯ ಸಂಪೂರ್ಣ ದಾಖಲಾತಿ ಪ್ರತಿ ಹಾಗೂ ಫಲಾನುಭವಿಗಳ ವಿವರ ನೀಡುವುದು) | ಬನ್ನೇರುಘಟ್ಟ ಅರಣ್ಯ ಪ್ರದೇಶದ ಸುತ್ತಮುತ್ತ ಬನ್ನೇರುಘಟ್ಟ, ಭೈರಪ್ಪನಹಳ್ಳಿ, ಗೊಲ್ಲಹಳ್ಳಿ, ಭೂತಾನಹಳ್ಳಿ, ಬಿಲ್ಲವಾರದಹಳ್ಳಿ, ಕನ್ನನಾಯಕನ ಅಗ್ರಹಾರ ಹಾಗೂ ಕಲ್ಕೆರೆ ಗ್ರಾಮಗಳಲ್ಲಿ ಅಕ್ರಮ ಸಕ್ರಮ ಯೋಜನೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ ಕಲಂ 94ಸಿಸಿರಡಿ ಯಾವುದೇ ಮನೆಗಳಿಗೆ ಹಕ್ಕುಪತ್ರ ನೀಡಿರುವುದಿಲ್ಲ. |

ಸಂಖ್ಯೆ: ಆರ್‌ಡಿ 83 ಎಲ್‌ಜಿಕ್ಯೂ 2023

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು